ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸಚಿವರ ಗಮನಕ್ಕೆ ತರಲಿಚ್ಛೆಪಡುತ್ತೇನೆ. ಏಕೆಂದರೆ, ಮಾನ್ಯ ಸಚಿವರಿಗೆ ಗೊತ್ತಿರಲಿಲ್ಲವೆಂದು ತೋರುತ್ತದೆ.

ಉಪಾಧ್ಯಕ್ಷರು : ಒಂದ್ನಿಮಿಷ ಕುಳಿತುಕೊಳ್ಳಿ. ಸಚಿವರು ಏನು ಹೇಳುತ್ತಾರೆಂಬುದನ್ನು ಕೇಳಿ.

ಶ್ರೀ ಆರ್. ಅಶೋಕ್ : ಮಾನ್ಯ ಪಾಟೀಲ್‌ರು ಏನು ಹೇಳಿದ್ದಾರೆ, ಈಗಾಗಲೇ ಅವರ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಈ ರೀತಿ ಬೆಂಗಳೂರಿನಲ್ಲಿ ಇರತಕ್ಕಂಥದ್ದು ಅಥವಾ ರಾಜ್ಯದ ಬೇರೆ ನಗರ ಪ್ರದೇಶದಲ್ಲಿ PHC ಗಳು work ಆಗುತ್ತಿಲ್ಲ. ಅಲ್ಲಿರುವವರು ಬೆಂಗಳೂರಿನಲ್ಲಿಯೇ ಇರಬೇಕೆನ್ನುವ ಒಂದೇ ಒಂದು ದೃಷ್ಟಿಯಿಂದ ಇದ್ದಾರೆಯೇ ಹೊರತು ಅವರು ಸೇವೆ ಮಾಡಬೇಕೆನ್ನುವ ದೃಷ್ಟಿಯಿಂದ ಅಲ್ಲ. ಕೆಲವರೆಲ್ಲಾ court ಮೆಟ್ಟಲು ಹತ್ತಿದ್ದಾರೆ. ಆ ದೃಷ್ಟಿಯಿಂದ ನಾನು ಈಗಾಗಲೇ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇನೆ. ಮಾನ್ಯ ಪಾಟೀಲರು ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ ಮಾಡಬೇಕೆಂದು ಏನು ಕೇಳಿದ್ದಾರೆ, ಅದನ್ನು ಮಂಜೂರು ಮಾಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಆರೋಗ್ಯ ಸಚಿವರು ಹೇಳಿದರು. ಆದರೆ ಕಳೆದ ವರ್ಷ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಾಡಿದ್ದಾರೆ.

ಉದ್ಯೋಗ ವಿನಿಮಯ ಕಛೇರಿಯಿಂದ ಒದಗಿಸಿರುವ ಉದ್ಯೋಗ

316(1448) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಉದ್ಯೋಗ ವಿನಿಮಯ ಕಚೇರಿಗಳೆಷ್ಟು ಹಾಗೂ ಅವುಗಳು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆ) ಇಲ್ಲಿಯವರೆಗೂ ಉದ್ಯೋಗ ವಿನಿಯಮ ಕಚೇರಿಯ ಮುಖಾಂತರ ಎಷ್ಟು ಜನ ನಿರುದ್ಯೋಗಿಗಳಿಗೆ ಸರ್ಕಾರಿ ಉದ್ಯೋಗವನ್ನು ಕಲ್ಪಿಸಲಾಗಿದೆ;

ಇ) ಉದ್ಯೋಗವನ್ನು ಬಯಸಿ ಇದುವರೆವಿಗೂ ನೋಂದಣಿ ಮಾಡಿಸಿರುವ ಕಾರ್ಡುದಾರರ ಸಂಖ್ಯೆ ಎಷ್ಟು (ವರ್ಗವಾರು ವಿವರಣೆ ನೀಡುವುದು)

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) 30

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳು	27
ಉಪ ಪ್ರಾದೇಶಿಕ ಉದ್ಯೋಗ ವಿನಿಯಮ ಕೇಂದ್ರ ಬೆಂಗಳೂರು	1
ಅಂಗವಿಕಲರ ವಿಶೇಷ ಉದ್ಯೋಗ ವಿನಿಮಯ ಕೇಂದ್ರ, ಬೆಂಗಳೂರು	1
ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕೇಂದ್ರ, ಬೆಂಗಳೂರು.	1
ಒಟ್ಟು	30

ಆ) 6,398

ವರ್ಷ (ಕ್ಯಾಲೆಂಡರ್ ವರ್ಷ)	ಉದ್ಯೋಗ ದೊರೆಕಿದವರ ಸಂಖ್ಯೆ
2003	2,968
2004	1,705
2005	1,725
ಒಟ್ಟು	6,398

ಇ) 13,38,668 (31–12–2005ರ ಅಂತ್ಯಕ್ಕೆ):

ವರ್ಗ	ನೋಂದಾಯಿಸಿ ಚಾಲ್ತಿ ದಾಖಲೆಯಲ್ಲಿರುವವರ ಸಂಖ್ಯೆ
ಪ.ಜಾತಿ	2,25,997
ಪ.ವರ್ಗ	51,128
ವರ್ಗ–I	40,753
ವರ್ಗ–II ಎ	84,834
ವರ್ಗ–II ಬಿ	43,998
ವರ್ಗ–III ಎ	59,855
ವರ್ಗ–III ಬಿ	85,162
ಇತರೆ	7,46,941
ಒಟ್ಟು	13,38,668

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ವರ್ಗ–1, ವರ್ಗ–2, ವರ್ಗ–2ಬಿ, ವರ್ಗ–3ಎ, ವರ್ಗ–3ಬಿ ಸೇರಿದಂತೆ 13,38,068 ಜನ ಕೆಲಸಕ್ಕಾಗಿ ನೋಂದಾಯಿಸಿದ್ದಾರೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು? ನಿಮ್ಮ ಉದ್ಯೋಗ ವಿನಿಮಯ ಕೇಂದ್ರಕ್ಕೆ ಬರತಕ್ಕಂಥ ಆ ಒಂದು ದರ್ಜೆಯ ಖಾಲಿ ಇರತಕ್ಕಂಥ ಹುದ್ದೆಗಳು ರಾಜ್ಯದಲ್ಲಿ ಎಷ್ಟು? ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರದಲ್ಲಿ ಏನಾದರೂ ಕ್ರಮ ಇದೆಯೇ? ಮೂರನೆಯದು, ನಿರುದ್ಯೋಗ ಭತ್ಯೆ ಕೊಡುತ್ತೇವೆಂದು ಹಿಂದೆ ಚುನಾವಣಾ ಸಂದರ್ಭದಲ್ಲಿ ಪ್ರಣಾಳಿಕೆಯಲ್ಲಿ ಹೇಳಿದ್ದಿರಿ. ಅಂದರೆ ನಿಮ್ಮ ಪಕ್ಷದವರೂ ಹೇಳಿದ್ದರು. ಆದರೆ, ನಿಮಗೆ ಅದು ಜ್ಞಾಪಕವಿದೆಯೋ? ಇಲ್ಲವೋ? ಆ ಪ್ರಶ್ನೆ ಬೇರೆ. ಆದರೆ, ನಿರುದ್ಯೋಗ ಭತ್ಯೆಯನ್ನು ಕೊಡತಕ್ಕಂಥ ತೀರ್ಮಾನವನ್ನು ಸರ್ಕಾರದವರು ಕೈಗೊಳ್ಳುತ್ತೀರಾ? ಒಂದು, ಕರ್ನಾಟಕ ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು? ಯವ ವರ್ಗ? ಉದ್ಯೋಗ ವಿನಿಮಯ ಕೇಂದ್ರಕ್ಕೆ ಬರತಕ್ಕಂಥ ವರ್ಗ. ಎರಡನೆಯದು, ನಿರುದ್ಯೋಗಿಗಳು, ನಿರುದ್ಯೋಗ ಭತ್ಯೆ. ಮೂರನೆಯದು, ಯಾವ್ಯಾವ ವರ್ಗದ ಹುದ್ದೆಗಳು, ಎಷ್ಟು ಖಾಲಿ ಇವೆ ಎನ್ನುವಂಥದ್ದು. ಈ ಬಗ್ಗೆ ಹೇಳಬೇಕು.

ಶ್ರೀ ಇಕ್ಬಾಲ್ ಅನ್ಸಾರಿ : ಹಿರಿಯ ಸದಸ್ಯರಾದಂಥ ವಾಟಾಳ್ ನಾಗರಾಜ್‌ರವರು ಪ್ರಶ್ನೆ ಕೇಳಿದ್ದಾರೆ. ನಿರುದ್ಯೋಗಿ ಭತ್ಯೆ ಬಗ್ಗೆ ಆಯಾ ಪಕ್ಷಗಳು ತಮ್ಮ ತಮ್ಮ ಪ್ರಣಾಳಿಕೆಗಳಲ್ಲಿ ಹೇಳುವುದು ನಿಜ. ಆದರೆ, ಸರ್ಕಾರದ ಮಟ್ಟದಲ್ಲಿ ಅದು ಯಾವುದೂ ಇನ್ನೂ ಇದಕ್ಕೆ ಬಂದಿಲ್ಲ. ಅದರ ಬಗ್ಗೆ ಸರ್ಕಾರ ನಿರ್ಣಯ ಮಾಡಬೇಕಾಗುತ್ತದೆ. ಆಮೇಲೆ, ಅದಕ್ಕೆ Cabinet decision ಆಗಬೇಕಾಗುತ್ತದೆ. House ಮುಂದೆ ಬರಬೇಕಾಗುತ್ತದೆ. ಇಲ್ಲಿಯವರೆಗೆ ಯಾವುದೂ ನಿರುದ್ಯೋಗಿ ಭತ್ಯೆ ಬಗ್ಗೆ ಏನೂ ಮಾಡಿಲ್ಲ. ಅದು ತಮಗೂ ಗೊತ್ತಿದೆ. ಇನ್ನು, ಇಲಾಖಾವಾರು ಖಾಲಿ ಇರುವ ಹುದ್ದೆಗಳ ಬಗ್ಗೆ ತಾವು ನಿನ್ನೆ ಪ್ರಶ್ನೆಯನ್ನು ಕೇಳಿದ್ದಿರಿ, ಎಲ್ಲೆಲ್ಲಿ, ಯಾವ್ಯಾವ categoryಗೆ ನೋಂದಾಯಿಸಲಾಗಿದೆ ಎಂದು ಕೇಳಿದ್ದರು. ಅದನ್ನು ಕೊಟ್ಟಿದ್ದೇನೆ. ಈಗ ಮಾನ್ಯ ಸದಸ್ಯರು ಇಲಾಖೆಯಲ್ಲಿ ಈ category wise ಎಲ್ಲೆಲ್ಲಿ vacancies ಇವೆ ಎಂದು ಕೇಳಿದ್ದಾರೆ. ಅದರ ಬಗ್ಗೆ ನಾನು ತದನಂತರ details ತೆಗೆದುಕೊಂಡು ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆಂದು ಹೇಳಿ ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರದಲ್ಲಿ ಯಾವುದಾದರೂ ತೀರ್ಮಾನ ವ್ಯವಸ್ಥೆ ಚಿಂತನೆ ಇದೆಯೇ ಎನ್ನುವುದೊಂದು ಪ್ರಶ್ನೆ. ಎರಡನೆಯದು, ಇದು ಸರ್ಕಾರಕ್ಕೆ

ಸಂಬಂಧಪಟ್ಟಂಥ ವ್ಯವಸ್ಥೆ. ಸರ್ಕಾರಿ ಉದ್ಯೋಗ ವಿನಿಮಯ ಕೇಂದ್ರ, ಸರ್ಕಾರಿ ಕಾರ್ಖಾನೆಗಳಿಗೆ, ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಖಾಸಗಿ ವಲಯದವರು ಬಹಳ ಬರುತ್ತಿದ್ದಾರೆ. ಮಾನ್ಯ ಪ್ರಕಾಶ್‌ರವರೂ ಕೂಡ ಇವರ ಜೊತೆಯಲ್ಲಿ ಇದಕ್ಕೆ ಸ್ವಲ್ಪ ಗಮನ ಕೊಡಬೇಕು. ಖಾಸಗೀಕರಣವಾದ ಮೇಲೆ ಕರ್ನಾಟಕಕ್ಕೆ ಅನೇಕ ಕಾರ್ಖಾನೆಗಳು ಬರುತ್ತಿವೆ. ಸಂಸ್ಥೆಗಳವರು ಬರುತ್ತಿವೆ. ಸಾವಿರಾರು ಉದ್ಯೋಗಿಗಳನ್ನು ಅವರು ತೆಗೆದುಕೊಳ್ಳತಕ್ಕಂಥ ಚಿಂತನೆ ಇದೆ. ಅದಕ್ಕೆ ಸ್ಥಳೀಯರನ್ನೇ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆಗೆ ಸರ್ಕಾರ ಯಾವ ನೀತಿ, ನಿರ್ಧಾರವನ್ನು ಅಳವಡಿಸಿದೆ? ನಿಮಗೆ ಗೊತ್ತಿರುವ ಹಾಗೆ, ಸರೋಜಿನಿ ಮಹಿಷಿ ವರದಿ ಜಾರಿಗೆ ತರಬೇಕೆಂದು 25 ವರ್ಷಗಳ ಹಿಂದೆ ಅಂದರೆ 1982–83 ಕೊಟ್ಟಂಥ ವರದಿ ಮೂಲೆ ಗುಂಪಾಗಿದೆ. ಕಸದ ತೊಟ್ಟಿಗೆ ಹೋಗಿದೆ. ಅದನ್ನು ಯಾರೂ ತೆಗೆದುಕೊಂಡಿಲ್ಲ. ಬಂದಂಥ ಎಲ್ಲಾ ಸರ್ಕಾರಗಳೂ ಉಪ ಸಮಿತಿಗಳನ್ನು ಮಾಡಿ, ಪುಟಗಳಗಟ್ಟಲೆ ಬರೆದರು. ಈವತ್ತಿನವರೆಗೂ ಅದು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಆದ್ದರಿಂದ, ನೇರವಾಗಿ ನಿಮಗೆ ಸಂಬಂಧವಿಲ್ಲದೇ ಇದ್ದರೂ ಈ ಉದ್ಯೋಗ ಸೃಷ್ಟಿಯಲ್ಲಿ ಕಾರ್ಮಿಕ ಇಲಾಖೆಯೂ ಬರುತ್ತದೆ. ಇದರಲ್ಲಿ ಸರ್ಕಾರದ ನೀತಿಯೂ ಬೇಕಲ್ಲಾ? ಸರ್ಕಾರದ ನೀತಿಗೆಂದೇ ನಾನು ಪ್ರಕಾಶ್‌ರವರನ್ನು ಎಳೆದಿದ್ದು. ಈ ವಿಚಾರದಲ್ಲಿ ಇದನ್ನು ಅವರ ಗಮನಕ್ಕೂ ತಂದೆ. ಅಂದರೆ 25 ವರ್ಷ, ಎರಡೂವರೆ ದಶಕಗಳು ಕಳೆದರೂ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರುವುದಕ್ಕಾಗಲಿಲ್ಲ. ಸರೋಜಿನಿ ಮಹಿಷಿ ವರದಿ ಜಾರಿಗೆ ನಾರಾಯಣ ಮೂರ್ತಿ ನಿಮಗೆ ಸೊಪ್ಪು ಹಾಕುವುದಿಲ್ಲ. ನಿಲೇಕಣಿ ನಿಮಗೆ ಸೊಪ್ಪು ಹಾಕುವುದಿಲ್ಲ. ಪ್ರೇಂಜಿ ನಿಮ್ಮನ್ನು ಕೇಳುವುದಿಲ್ಲ. ನಮ್ಮಿಷ್ಟ, ನಾವು ಯಾರನ್ನು ಬೇಕಾದರೂ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಆದರೆ, ಅವರನ್ನೆಲ್ಲಾ ಒಡಿತದಲ್ಲಿಟ್ಟುಕೊಂಡು ಈ ರಾಜ್ಯದಲ್ಲಿ ಬರತಕ್ಕಂಥ ಕಾರ್ಖಾನೆಗಳ ಮೇಲೆ ಒತ್ತಡ ತರಕ್ಕಂಥದ್ದಕ್ಕೆ ಒಂದೇ ಒಂದು ಇರುವುದು ಅದು ಸರೋಜಿನಿ ಮಹಿಷಿ ವರದಿ. ಇದನ್ನು ಸ್ಪಷ್ಟವಾಗಿ ಜಾರಿಗೆ ತರತಕ್ಕಂಥ ಕಾರ್ಯಕ್ರಮವನ್ನು ನಿಮ್ಮ ಸರ್ಕಾರ ಕೈಗೊಂಡಿದೆಯೇ? ಕರ್ನಾಟಕಕ್ಕೆ ಅನೇಕ ಕಾರ್ಖಾನೆಗಳು ಬಂದು ನೀರು ಕೇಳುತ್ತಾರೆ, ರಸ್ತೆ ಕೇಳುತ್ತಾರೆ, ವಿದ್ಯುಚ್ಛಕ್ತಿ ಕೇಳುತ್ತಾರೆ. ಎಲ್ಲಾ ಕೊಟ್ಟುಬಿಡುತ್ತೀರಿ. ಆದರೆ, ತಮಿಳುನಾಡಿನಲ್ಲಿ ಕರುಣಾನಿಧಿ ಹಿಂದೆ ಇದ್ದಾಗ ಸ್ಥಳೀಯರಿಗೆ, ಮಣ್ಣಿನ ಮಕ್ಕಳಿಗೆ 100ಕ್ಕೆ 99ರಷ್ಟು ಹುದ್ದೆಗಳನ್ನು ಕೊಡಬೇಕು, ಹಾಗಿದ್ದರೆ, ನಾವು ನೀರು, ರಸ್ತೆ, ಎಲ್ಲವನ್ನೂ ಕೊಡುತ್ತೇವೆಂದು ಹೇಳಿದರು. ಇಲ್ಲಿ ಅದಕ್ಕೆ ಏನು ಮಾಡಿದ್ದೀರೆಂದು ತಾವು ದಯವಿಟ್ಟು ಹೇಳಬೇಕು.

ಶ್ರೀ ವೈಜನಾಥ ಪಾಟೀಲ್ : ಈಗ ಉತ್ತರದಲ್ಲಿ, ಒಂದು ಲಕ್ಷ, 22 ಸಾವಿರ ಎಂದು ಸಂಖ್ಯೆ ಏನು ಹೇಳಿದ್ದಾರೆ, ಇದು ಉದ್ಯೋಗ ವಿನಿಮಯ ಕೇಂದ್ರದಿಂದ ತೆಗೆದುಕೊಂಡಿದ್ದೇ. ಅಥವಾ direct recruitment? ಇವತ್ತು ಬಹಳಷ್ಟು ಸರ್ಕಾರಿ ನೌಕರಿಗಳು District Employment Exchangeಗೆ ಹೋಗುವುದೇ ಇಲ್ಲ. Register ಮಾಡುವುದೇ ಇಲ್ಲ. Press, paper ನಲ್ಲಿ, ಇಂಥ department ನಲ್ಲಿ ಇಂಥ ವರ್ಗದ ಹುದ್ದೆಗಳು ಇವೆ, application ಹಾಕಿ ಎಂದು ಬಂದರೆ ಅವರು direct ಆಗಿ ಹಾಕುತ್ತಾರೆ. 1999ರಲ್ಲಿ High Court ನಲ್ಲಿ dicision ಆಯಿತು ಅದರ ನಂತರ ಈ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಏನೂ ಕೆಲಸವಿಲ್ಲ. ಕೇವಲ ನೋಣ ಹೊಡೆಯುವ ಕೆಲಸವಾಗಿದೆ. Employment Office ಗೆ ಯಾರೂ ಹೋಗುತ್ತಿಲ್ಲ. Employment Office ಯಾವ department ಅನ್ನೂ ಕೇಳುತ್ತಿಲ್ಲ. ಅದಕ್ಕೇ direct employment ಮಾಡಿಕೊಂಡು paper ನಲ್ಲಿ ಒಂದು notification ಕೊಡುತ್ತಾರೆ. ಬಿಹಾರದಿಂದ ಕರ್ನಾಟಕಕ್ಕೆ 5 ಸಾವಿರ ಸಪಾಯಿ ಕರ್ಮಚಾರಿಗಳು ಬಂದಿದ್ದಾರೆ. ಒಬ್ಬ IAS ಅಧಿಕಾರಿ ಅಲ್ಲಿರುವವರ ಇದ್ದರೆಂದರೆ ಅವರೊಂದು paper ನಲ್ಲಿ ಹಾಕಿಬಿಡುತ್ತಾರೆ. ಅಲ್ಲಿನವರಿಗೆ ನೌಕರಿ ಕೊಡುತ್ತಾರೆ. Employment Officeಗೆ ಏನೂ ಕೆಲಸವೇ ಇಲ್ಲ. ಅದಕ್ಕೆ ಅದನ್ನು strong ಮಾಡಬೇಕು. ಅದಕ್ಕೆ ಈ ಸಂಖ್ಯೆ ಸುಳ್ಳೆನಿಸುತ್ತದೆ. Employment Office ನಿಂದ ಯಾರೂ ಹೋಗುತ್ತಲೇ ಇಲ್ಲ. ಅದರ ಬಗ್ಗೆ clarification ಕೊಡಬೇಕು.

ಶ್ರೀ ನೆ.ಲ. ನರೇಂದ್ರ ಬಾಬು : ಮಾನ್ಯ ಸಚಿವರು ವಿವಿಧ ವರ್ಗಗಳು ಸೇರಿ 13,38,668 ನೋಂದಾಣಿಯಾಗಿದೆ ಎಂದು ಹೇಳಿ ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಹಾಗೆಯೇ, 2003 ರಿಂದ 2005ರಲ್ಲಿ ಕೊನೆಗೆ 2005ರಲ್ಲಿ 1725 ಜನರಿಗೆ ಕೆಲಸ ಸಿಕ್ಕಿದೆ ಎಂದು ಹೇಳಿದ್ದಾರೆ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ಮಾತು ಹೇಳಿದರು. ಅದನ್ನು ಅಕ್ಷರಶಃ ನಾನು ಒಪ್ಪುತ್ತೇನೆ. ಇವತ್ತು ನಿರುದ್ಯೋಗ ಸಮಸ್ಯೆ ಕಾಡುತ್ತಿರುವುದಕ್ಕೆ ನಮ್ಮ employment exchange ಗಳು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿವೆಯೇ ಎಂದು ಪ್ರಶ್ನೆ ಹಾಕಿಕೊಂಡರೆ ಖಂಡಿತವಾಗಿಯೂ ಶೂನ್ಯ. ಅವರು ಹೇಳಿದ ಹಾಗೆ, ಇವತ್ತು ನಮ್ಮ ಬೆಂಗಳೂರು ನಗರದಲ್ಲಿ ಉದ್ಯೋಗಾವಕಾಶಗಳು ಇವೆ. ಆದರೆ, employment exchange ಗಳ

ಮುಖೇನ ತೆಗೆದುಕೊಳ್ಳುತ್ತಿಲ್ಲ. ಈಗ ತಾನೇ ವೈಜನಾಥ ಪಾಟೀಲರು ಹೇಳಿದರು. Sweeper to software ಅವಕಾಶಗಳಿದ್ದರೂ ಸಹ ತೆಗೆದುಕೊಳ್ಳುತ್ತಿಲ್ಲ. ಹಿಂದೆ ಇದ್ದಂಥ ಸಚಿವರು ಭರವಸೆ ಕೊಟ್ಟಿದ್ದರು. Employment Park ಗಳನ್ನು ಮಾಡುತ್ತೇವೆಂದು, ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ ಎಂದು ಇದೇ ಸರ್ಕಾರದಲ್ಲಿದ್ದ ಹಿಂದೆ ಇದ್ದ ಸಚಿವರು ಭರವಸೆ ಕೊಟ್ಟಿದ್ದರು. ದಯವಿಟ್ಟು, ಅದರ ಬಗ್ಗೆ ಚಿಂತನೆ ನಡೆದಿದೆಯೇ? ಅದರ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೆ ಹೇಳಿ ಎಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ವಾಟಾಳ್ ನಾಗರಾಜ್ ಸಾಹೇಬರು, ಉದ್ಯೋಗಗಳನ್ನು ಭರ್ತಿ ಮಾಡುವಂಥ ಏನಾದರೂ ಕ್ರಮ ಸರ್ಕಾರದಲ್ಲಿದೆಯೇ ಎಂದು ಕೇಳಿದರು. ಖಾಸಗಿ ವಲಯದಲ್ಲಿ ಉದ್ಯೋಗ ಭರ್ತಿ ಮಾಡುವುದು ಇವತ್ತು ಸರ್ಕಾರದ ವತಿಯಿಂದ ನಾವು ಹೆಚ್ಚಿಗೆ ಕನ್ನಡಿಗರನ್ನು ತೆಗೆದುಕೊಳ್ಳಬೇಕು, ಆಮೇಲೆ, ಸರೋಜಿನಿ ಮಹಿಷಿ ವರದಿಯ ಪ್ರಕಾರ ಕನ್ನಡಿಗರಿಗೆ ಆದ್ಯತೆ ಕೊಡಬೇಕೆಂದು ಹೇಳಿ ಅದರಲ್ಲಿ ನಾವು ಆದೇಶಿಸಿದ್ದೇವೆ. ಆದರೆ, ಇದು ಖಾಸಗಿ ವಲಯವಾದ್ದರಿಂದ I.T. Company ಗಳು, B.T. Company ಗಳು ಮತ್ತು ಬೇರೆ ಬೇರೆ company ಗಳು ಇವತ್ತು ಅವುಗಳಿಗೆ ಬೇಕಾದಂಥ engineer ಗಳನ್ನು ಅರ್ಹತೆ ನೋಡಿಕೊಂಡು ಅವರು ತೆಗೆದುಕೊಳ್ಳುತ್ತಿದ್ದಾರೆ. ಎರಡನೆಯದಾಗಿ, ಖಾಸಗಿಯವರಿಗೆ ಇವರನ್ನೇ ತೆಗೆದುಕೊಳ್ಳಬೇಕೆಂದು ಹೇಳಿ ನಾವು ಹೇಳಲಿಕ್ಕೆ ನಮ್ಮ ಹತ್ತಿರ ಯಾವುದೇ ಕಾನೂನು ಇಲ್ಲ. ಮೂರನೆಯದಾಗಿ, ಅವರ ಕಳಕಳಿಯನ್ನು ಇವತ್ತು ಸರ್ಕಾರ ಅರ್ಥ ಮಾಡಿಕೊಳ್ಳುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ನಮ್ಮ ನೆಲ, ಜಲವನ್ನು ನಾವು ಕೊಡುವುದಕ್ಕಿಂತ ಮುಂಚಿತವಾಗಿ ಅವರಿಗೆ ನಾವು ತಮಿಳುನಾಡು ರಾಜ್ಯದಲ್ಲಿ ಮಾಡಿದ ಹಾಗೆ ನಿರ್ಬಂಧನೆಯನ್ನು ಹೇರಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಮುಂದಿನ ದಿನಗಳಲ್ಲಿ ಸರ್ಕಾರ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆ. ನಾಲ್ಕನೆಯದಾಗಿ, ನಮ್ಮ ಹಿರಿಯರಾದಂಥ ಪಾಟೀಲರು ಸಂಖ್ಯೆ ಸುಳ್ಳು ಎಂದು ಹೇಳಿದರು. ಇತ್ತೀಚಿನ ದಿನಗಳಲ್ಲಿ ಏನಾಗಿದೆ ಎಂದರೆ, ಇವು ನೊಂದಾವಣಿ ಮಾಡಿದಂಥ ಸಂಖ್ಯೆಗಳು. enroll ಮಾಡಿದ್ದಾರೆ. Register ಆಗಿರುವಂಥದ್ದು ಇದು. ಎರಡನೆಯದಾಗಿ, ಇತ್ತೀಚಿನ ದಿನಗಳಲ್ಲಿ ಆಯಾ ಇಲಾಖೆಗಳಲ್ಲಿ ನೇರ ನೇಮಕಾತಿ ಆಗುತ್ತಿರುವುದರಿಂದ through Employment Exchange ಗಳಿಂದ ನೇರ ನೇಮಕಾತಿಗಳು ಕಡಿಮೆಯಾಗಿದೆ. ಅದೇ ರೀತಿ KPSC ಯಿಂದ

ಕೂಡ ನೇರ ನೇಮಕಾತಿಯಾಗುತ್ತಿದೆ. ಅದಕ್ಕೋಸ್ಕರ, ನಮ್ಮ Employment Exchange ನಿಂದ ನೇಮಕಾತಿಯಾಗುವುದು ಕಡಿಮೆಯಾಗಿದೆ ಎಂದು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. 2005ರಲ್ಲಿ 1725 ಉದ್ಯೋಗವನ್ನು ಕೊಡಲಾಗಿದೆ ಎಂದು ನಮ್ಮ ಮಾನ್ಯ ನರೇಂದ್ರ ಬಾಬುರವರು ಹೇಳಿದರು. ಇದನ್ನು ಸರ್ಕಾರಿ ವಲಯದಲ್ಲಿ ಕೊಡಲಾಗಿದೆ. ಆದರೆ, ಖಾಸಗಿ ವಲಯದಲ್ಲಿ Company Act ಪ್ರಕಾರ ನಾವು ಯಾವುದೇ ನಿರ್ಬಂಧವನ್ನು ಹೇರಲಾಗಿಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಇನ್ನು, employment park ಬಗ್ಗೆ ಈ ವರ್ಷದ budget ನಲ್ಲಿ ಒಂದಿಷ್ಟು ಹಣವನ್ನು ನಾವು ಒದಗಿಸಿದ್ದೇವೆ. ಆ employment parkನ ಕಾರ್ಯವೇನು ಬರುತ್ತದೆಂದರೆ, ಎಲ್ಲೆಲ್ಲಿ vacancies ಇದೆ ಎನ್ನುವ information ಅನ್ನು ನಾವು ಕೊಡುತ್ತೇವೆ. ಇವತ್ತು private sector ಆಗಲಿ, Government ನಲ್ಲಾಗಲಿ, ಬೇರೆ ಯಾವ್ಯಾವ ಇಲಾಖೆಗಳಲ್ಲಿ ಎಷ್ಟು vacancies ಇವೆ ಎಂಬುವ ಮಾಹಿತಿಯನ್ನೂ ಕೊಡುತ್ತೇವೆ. ಅದರ ಹೊರತಾಗಿ, ಅವರನ್ನು job ಗೆ ತೆಗೆದುಕೊಳ್ಳುವುದು, ಸರ್ಕಾರದ ಮುಂದಿನ ಕ್ರಮದ ಪ್ರಕಾರ ಅವರನ್ನು employ ಮಾಡಿಕೊಳ್ಳುವುದಕ್ಕೆ ಆದ್ಯತೆ ಇರುತ್ತದೆಂದು ಈ ಸಂದರ್ಭದಲ್ಲಿ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ನೇರವಾಗಿ ಕೇಳಿದ್ದು, ಈಗ ಬೇರೆ ವಿಚಾರದಲ್ಲಿ IT, BT ಯವರನ್ನು ಅರ್ಹತೆ ಮೇಲೆ ತೆಗೆದುಕೊಳ್ಳುತ್ತಾರೆ. ತೆಗೆದುಕೊಳ್ಳಲಿ. ಯಾರನ್ನು? ಕನ್ನಡದವರು ಇಲ್ಲವೇ? ಅವರಿಗೆ ಯಾವ ಮಾನದಂಡಹಾಕಿದ್ದಾರೆ? ಆ ಮಾನದಂಡದ ಮೇಲೆ ಸಿಗತಕ್ಕಂಥ ಕನ್ನಡಿಗರೇ ಇದ್ದಾರಲ್ಲವೇ? ಅವರನ್ನು ಏಕೆ ತೆಗೆದುಕೊಳ್ಳುವುದಿಲ್ಲ? ನಾರಾಯಣ ಮೂರ್ತಿಯವರನ್ನು ಕೇಳುವುದಕ್ಕೆ ಭಯ ಇದೆಯೇ? ಪ್ರೇಂಜಿಯವರನ್ನು ಕೇಳುವುದಕ್ಕೆ ಭಯ ಇದೆಯೇ? ನೀಲಕೇಣಿಯವರನ್ನು ಕೇಳುವುದಕ್ಕೆ ಭಯ ಇದೆಯೇ? ಐ.ಟಿ. ಬಿ.ಟಿ ಕಂಪನಿಯವರು ಸರ್ಕಾರದ ಮೇಲೆ ಸವಾರಿ ಮಾಡುವುದಕ್ಕೆ ಸಾಧ್ಯವೆ? ಅವರಿಗೆ ನೀವು ನೇರವಾಗಿ ಹೇಳಿ. ಎಷ್ಟು ಜನರನ್ನು ನೀವು ತೆಗೆದುಕೊಂಡಿದ್ದೀರಿ? ಅದರಲ್ಲಿ ಕನ್ನಡಿಗರಿಗೆ ಎಷ್ಟು ಜನರಿಗೆ ಕೊಟ್ಟಿದಿರಿ? ಏಕೆ ತೆಗೆದುಕೊಂಡಿಲ್ಲ? ಯಾವ ಕಾರಣಕ್ಕಾಗಿ ಎಂದು ಅವರಿಗೆ ಹೇಳಬೇಕಲ್ಲವೆ? ಏನೂ ಇಲ್ಲದೆ ಸುಮ್ಮನೆ ಕುಳಿತುಕೊಂಡರೆ ಪ್ರಶ್ನೆ ಬಗೆಹರಿಯುವುದಿಲ್ಲ. ಸರೋಜಿನಿ ಮಹಿಷಿ ವರದಿಯ ಬಗ್ಗೆ, ನಾನು ಮತ್ತೆ ಪ್ರಕಾಶ್‌ರವರ ಹತ್ತಿರ ಬರುತ್ತಿದ್ದೇನೆ, ನಾನೇಕೆ ಬರುತ್ತಿದ್ದೆನೆಂದರೆ, ನಿಮ್ಮ ಸರ್ಕಾರದ

ನಿಲುವು ಏನು? ಸರೋಜಿನಿ ಮಹಿಷಿ ವರದಿಯ ಬಗ್ಗೆ 25 ವರ್ಷಗಳಿಂದಲೂ ಬಂದಂಥ ಸರ್ಕಾರಗಳೆಲ್ಲವೂ ಮಾಡುತ್ತೇವೆಂದು ಹೇಳಿದರು, ನಿಮ್ಮ ಸರ್ಕಾರದ ನಿಲುವು ಏನು? ನೀವೂ ಕೂಡ ಹಿಂದೆ ಎರಡು-ಮೂರು ಸರ್ಕಾರದಲ್ಲಿ ಇದ್ದಿರಿ, ಪಟೇಲ್‌ರ ಸರ್ಕಾರದಲ್ಲಿ ಇದ್ದಿರಿ, ಧರ್ಮಸಿಂಗ್‌ರವರ ಸರ್ಕಾರದಲ್ಲಿ ಇದ್ದಿರಿ, ತಾವು ಯಾವ ಸರ್ಕಾರದಲ್ಲಿ ಇದ್ದರೂ ನನಗೆ ಸಂತೋಷ. ಅದಕ್ಕೇನೂ ವಿರೋಧವಿಲ್ಲ, ನಿಮ್ಮ ನೀತಿ ಏನು? ಖಂಡತುಂಡವಾಗಿ ಹೇಳಿ, ಸರೋಜಿನಿ ಮಹಿಷಿ ವರದಿ ಇಂಥ ಕಾಲದಲ್ಲಿ ನಾವು ಜಾರಿ ಮಾಡುತ್ತೇವೆಂದು ಹೇಳಿ. ವರದಿ ಪ್ರಕಾರ 15 ವರ್ಷದಿಂದಲೂ ಇದ್ದವರು ಎಂದು ಇದೆ ಈಗ ಅದನ್ನು ಬದಲಾವಣೆ ಮಾಡಬೇಕು, ಈಗ ಅದನ್ನು ನಲವತ್ತು ವರ್ಷಗಳಿಂದ ಇದ್ದವರು ಎಂದು ಆಗಬೇಕು. ಏಕೆಂದರೆ, ಸುಮಾರು ಐವತ್ತು ಲಕ್ಷ ಜನ 15 ವರ್ಷಗಳಿಂದ ಬೇರೆ ಹೊರಗಡೆಯಿಂದ ಕರ್ನಾಟಕಕ್ಕೆ ಬಂದಿದ್ದಾರೆ, ಅದಕ್ಕೆ ನಾನು ತಮಗೆ ಹೇಳುತ್ತಿದ್ದೇನೆಂದರೆ, ತಾವು ದಯಮಾಡಿ ಹೇಳಲೇಬೇಕು. ಅದಕ್ಕೆ ನಾನು ತಮ್ಮನ್ನು ಕೇಳುತ್ತಿದ್ದೇನೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. ನಾನು ಪೇಪರ್‌ನಲ್ಲಿ ಓದಿದ್ದೇನೆ, ಸರೋಜಿನಿ ಮಹಿಷಿ ವರದಿಯನ್ನು ಈ ರಾಜ್ಯದಲ್ಲಿ ಇಂಪ್ಲಿಮೆಂಟ್ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದರು. ಮಾನ್ಯ ಮುಖ್ಯಮಂತ್ರಿಗಳು ಸರೋಜಿನಿ ಮಹಿಷಿ ವರದಿಯ ಬಗ್ಗೆ ಈ ಸಂದರ್ಭದಲ್ಲಿ ನಮಗೆ ಮಾಡಲಿಕ್ಕಾಗುವುದಿಲ್ಲವೆಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ರಾಜ್ಯದ ಜನರ ಪರಿಸ್ಥಿತಿ ಏನಾಗಬೇಕು? ನಮ್ಮ ಜನರಿಗೆ ನಮ್ಮ ಯುವಕರಿಗೆ ನೌಕರಿ ಸಿಗುತ್ತದೆಯೆ? ಈ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳೇ ಹೇಳಿಕೆ ಕೊಟ್ಟಮೇಲೆ ಪಾಪ ಮಂತ್ರಿಗಳೇನು ಹೇಳುತ್ತಾರೆ?

ಶ್ರೀ ಇಕ್ಬಾಲ್ ಅನ್ಸಾರಿ : ನಮ್ಮ ವಾಟಾಳ್ ನಾಗರಾಜ್‌ರವರು ಹೇಳಿದ ಪ್ರಕಾರ ಐ.ಟಿ. ಬಿ.ಟಿ. ಕಂಪನಿಗಳಿಗೆ ಸರ್ಕಾರ ಏನೂ ಅವರ ಮರ್ಜಿಗೆ ಬಿದ್ದಿಲ್ಲ. ಆದರೆ ಕೆಲವೊಂದು ಕಾರಣಗಳು ಇರುತ್ತವೆ, ಹೀಗಾಗಿ ನಾವು ಅವರಿಗೆ formal ಆಗಿಲ್ಲದಿದ್ದರೂ informal ಆಗಿ ನಾವು ತಿಳಿಸಿದ್ದೇವೆ. ನಮ್ಮ ರಾಜ್ಯದಲ್ಲಿ ಹೆಚ್ಚಿನ ಆದ್ಯತೆ ಕೊಡಬೇಕು, ಪ್ರತಿಯೊಂದು ನಾವು relaxation ಕೊಡುತ್ತಿದ್ದೇವೆಂದು ಹೇಳಿದ್ದೇವೆ. ಅವರು ಅದಕ್ಕೆ ಭರವಸೆ ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಅದರ ಬಗ್ಗೆ ನಾವು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವೈಜನಾಥ ಪಾಟೀಲ್ : ಅಂಥ ಸವಲತ್ತುಗಳೇನು ಸಿಗುತ್ತವೆ ಅವುಗಳನ್ನು ಬಂದ್ ಮಾಡಿ.

ಶ್ರೀ ಇಕ್ಬಾಲ್ ಅನ್ಸಾರಿ : ಪುನಃ ನಾವು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಕ್ಯಾಬಿನೆಟ್‌ನಲ್ಲಿ ಚರ್ಚಿಸಿ ಕ್ರಮ ತೆಗೆದುಕೊಳ್ಳುತ್ತೇವೆ. ಡಾ॥ ಪಾಟೀಲ್‌ರವರು, ಮಹಿಷಿ ವರದಿ ಜಾರಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಎಂದರು, ಬಹುಶಃ ಡಾಕ್ಟರ್‌ರವರು ಅದನ್ನು ಸರಿಯಾಗಿ ನೋಡಿದ್ದಾರೋ ಇಲ್ಲವೆಂದು ನನಗೆ ಅನ್ನಿಸುತ್ತದೆ. ಆ ಪತ್ರಿಕೆಯನ್ನು ಇನ್ನೊಂದು ಸಾರಿ ನೋಡಬೇಕು, ಏಕೆಂದರೆ ಡಾ॥ ಸರೋಜಿನಿ ಮಹಿಷಿ ವರದಿಯಲ್ಲಿ ಕನ್ನಡಿಗರಿಗೆ ಆದ್ಯತೆ ಕಡ್ಡಾಯವಾಗಿ ಕಲ್ಪಿಸಬೇಕೆಂದು ವರದಿ ಕೊಟ್ಟಿದ್ದಾರೆ. ಅದು ಎಲ್ಲಿ ಅನುಷ್ಠಾನವಾಗಿದೆ ಎಲ್ಲಿ ಅನುಷ್ಠಾನವಾಗಿಲ್ಲ ಎನ್ನುವುದರ ಬಗ್ಗೆ ಪರಿಶೀಲಿಸೋಣ, ಅದರ ಬಗ್ಗೆ ಇವತ್ತಿನವರೆಗೆ ಕಡೆಗಣಿಸಲಾಗಿದೆ ಎಂದು ತಾವು ದಯಮಾಡಿ ತಪ್ಪಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಹೋಗಬೇಡಿ ಈ ಸರ್ಕಾರ ಏನು ಇದೆ ನಾವು ಯುವಕರಿಗೆ ಹಾಗೂ ಕನ್ನಡಿಗರಿಗೋಸ್ಕರವೇ ಇದ್ದೇವೆಂದು ಡಾಕ್ಟರ್‌ರವರಿಗೆ ನಾನು ಹೇಳಬಯಸುತ್ತೇನೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, On the flour of the Houseನಲ್ಲಿ ನಿಮ್ಮದು ಕಮಿಟ್‌ಮೆಂಟ್ ಇದೆ, ಆದರೂ ಅದರ ಬಗ್ಗೆ ಏನೂ ಆಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸರೋಜಿನಿ ಮಹಿಷಿ ವರದಿಯ ಬಗ್ಗೆ ನೀವು ಸ್ಪಷ್ಟವಾಗಿ ಹೇಳಬೇಕು. ಏಕೆ ಇದರಲ್ಲಿ ಮುಚ್ಚುಮರೆ ಏನು ಇದೆ? ಅವರು ಕಾರ್ಮಿಕ ಸಚಿವರಾಗಿದ್ದಾರೆ. ಅವರನ್ನು ತಳ್ಳಿ ನೀವು ಹೇಳಬೇಕು ಎಂಬುದು ನನ್ನ ಅರ್ಥವಲ್ಲ. ನೀವು ಅದಕ್ಕೆ ಜವಾಬ್ದಾರಿ ಇರುತ್ತೀರಿ, ಆ ಉದ್ದೇಶದಿಂದ ನಾನು ಹೇಳಿದ ಅದಕ್ಕೆ ನನ್ನ ಅಭ್ಯಂತರವಿಲ್ಲ, ಈಗ ನೀವು ಸ್ಪಷ್ಟವಾಗಿ ಭರವಸೆ ಕೊಡಬೇಕು. ಸರೋಜಿನಿ ಮಹಿಷಿ ಈ ವರ್ಷ ಜಾರಿಗೆ ತೆಗೆದುಕೊಳ್ಳುತ್ತಿದ್ದೇವೆ. 25 ವರ್ಷಗಳಿಂದ ಮಾಡಿದಂತೆ ಕಾಲಹರಣ ನಾವು ಮಾಡುವುದಿಲ್ಲ, ತಾವು ಇದನ್ನು ಹೇಳಬೇಕು. ಅದನ್ನು ತಾವು ಸ್ಪಷ್ಟಪಡಿಸಿದರೆ ಆಗ ನಮಗೆ ಸಂತೋಷವಾಗುತ್ತದೆ, ರಾಜ್ಯದ ಜನತೆ ಕೂಡ ನಿಮ್ಮ ಬಗ್ಗೆ ಸಂತೋಷಪಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಾರ್ ನನಗೊಂದು ಸಂಶಯ ಬರುತ್ತಿದೆ ಏಕೆಂದರೆ ಅವರು ಸರೋಜಿನಿ ಮಹಿಷಿಯ ಬಗ್ಗೆ ಹೇಳಿ ಎಂದು ಮಾನ್ಯ ಪ್ರಕಾಶ್‌ರವರಿಗೆ ಒತ್ತಾಯ ಮಾಡುತ್ತಿದ್ದಾರೆ, ಸರೋಜಿನಿ ಮಹಿಷಿಯವರ ವರದಿ ಬಗ್ಗೆ ಒತ್ತಾಯ ಮಾಡುತ್ತೇನೆಂದು ಹೇಳುತ್ತಿಲ್ಲ. ಅದಕ್ಕೆ ನಾನು ಸ್ಪಷ್ಟೀಕರಣ ಕೇಳುತ್ತಿದ್ದೇನೆ ದಯವಿಟ್ಟು ತಾವು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಆ ವಿಚಾರಗಳನ್ನು ಬೇರೆ ವಿಧದಲ್ಲೂ ಪ್ರಕಾಶ್‌ರವನ್ನು ಕೇಳುವುದಕ್ಕೆ ಆಗುವುದಿಲ್ಲ, ಅವರು ಪಾಪ ಆದರ್ಶವಾದಿಗಳು ಇಂಥ ವಿಚಾರಗಳನ್ನು ಹೇಳುವುದಕ್ಕೆ ಆಗುವುದಿಲ್ಲ. ಇದನ್ನು ನೋಡಿ ಎಲ್ಲಿಗೆ ಬಂದು ಎಲ್ಲಿಗೆ ತೆಗೆದುಕೊಂಡು ಬರುತ್ತಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಾಟಾಳ್ ನಾಗರಾಜ್‌ರವರು, ಕನ್ನಡಿಗರಿಗೆ ಈ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದರ ಬಗ್ಗೆ ನಮ್ಮ ಕಾರ್ಮಿಕ ಸಚಿವರು ಬಹಳ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಇದು ನಮ್ಮ ಸರ್ಕಾರ ಎನ್ನತಕ್ಕಂಥದ್ದರ ಪ್ರಶ್ನೆಯಲ್ಲ, ಎಲ್ಲಾ ಸರ್ಕಾರಗಳೂ ಕೂಡ ಸರೋಜಿನಿ ಮಹಿಷಿಯವರು ಕೊಟ್ಟಿರತಕ್ಕಂಥ ವರದಿಯನ್ನು ಒಪ್ಪಿ ಕನ್ನಡಿಗರಿಗೆ ಶೇಕಡ 85 ರಷ್ಟು ಮೀಸಲಾತಿಯಿಡಬೇಕೆನ್ನುವ ವಾದವನ್ನು ನಾವು ಒಪ್ಪಿದ್ದೇವೆ, ಅನೇಕ ಸಂದರ್ಭಗಳಲ್ಲೂ ಕೂಡ ಆದೇಶವನ್ನು ಎಲ್ಲಾ ಕಡೆಗೂ ಕಳುಹಿಸಿದ್ದೇವೆ. ಜಿಲ್ಲಾಧಿಕಾರಿಗಳು ಪ್ರತಿ ಮುರು ತಿಂಗಳಿಗೊಂದು ಸಾರಿ ಅಂಥ ಕಾರ್ಖಾನೆಗಳು ಯಾವ್ಯಾವು ಇದ್ದಾವೆ ಆ ಕಾರ್ಖಾನೆಗಳಲ್ಲಿ ಕನ್ನಡಿಗರು ಎಷ್ಟು ಇದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಅವರು ವಿವರಗಳನ್ನು ತರಿಸಿಕೊಂಡು ಮಾಡತಕ್ಕಂಥದ್ದು ಇದೆ. ತಮ್ಮ ಆತಂಕ ನಮಗೆ ಅರ್ಥವಾಗಿದೆ. ಹೇಗಾಗಿದೆ ಎಂದರೆ domicility ವಿಚಾರ ಬಂದಾಗ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿರತಕ್ಕಂಥವರೆಲ್ಲರೂ ಬಂದು ನಾವು ಬೆಂಗಳೂರು, ಹೊಸಪೇಟೆ, ಬಳ್ಳಾರಿ, ಎಂದು ಅವರ ಅಂಚೆ ವಿಳಾಸವನ್ನು ಕೊಟ್ಟು ಅಲ್ಲಿಯೇ ಅವರು ಹುಟ್ಟಿ ಅಲ್ಲಿಯವರಾಗಿದ್ದಾರೆ ಎನ್ನತಕ್ಕಂಥ ರೀತಿಯಲ್ಲಿ ತಪ್ಪು ಅಭಿಪ್ರಾಯ ಕೊಡುತ್ತಿದ್ದಾರೆ. ಆದರೆ ಅವರ ಹೆಸರುಗಳನ್ನು ನೋಡಿದರೆ ಅವರು ಎಲ್ಲಿಂದ ಮೂಲದಿಂದ ಬಂದಿದ್ದಾರೆಂದು ಗೊತ್ತಾದರೆ ಅವರು ಕನ್ನಡಿಗರಲ್ಲ ಎಂದು ಅನೇಕ ಸಂದರ್ಭದಲ್ಲಿ ಗೊತ್ತಾಗುತ್ತದೆ, ಮತ್ತು ತಾವು ಹೇಳಿದಂತೆ ಇದರ ಕಡೆಗೆ ವ್ಯಾಪಾಕವಾದಂಥ ಜಾಲವೂ ಕೂಡ ನಡೆಯುತ್ತಿದೆ. ಕನ್ನಡಿಗರಿಗೆ ಮೋಸವಾಗುವಂಥ ರೀತಿಯಲ್ಲಿ ಬೇರೆ ಬೇರೆ ರಾಜ್ಯಗಳಿಂದ ಬಂದಂಥ ಕೆಲವು ಹಿರಿಯ ಅಧಿಕಾರಿಗಳು ಕೇಂದ್ರ ಆಡಳಿತಕ್ಕೆ ಒಳಪಟ್ಟಿರತಕ್ಕಂಥ ಕೆಲವು ಉದ್ಯಮಿಗಳಲ್ಲಿರತಕ್ಕಂಥ ಹಿರಿಯ ಅಧಿಕಾರಿಗಳು ಅವರು ತಮ್ಮ ಪಕ್ಷಪಾತವನ್ನು ಅನೇಕ ಕಡೆಗೆ ತೋರಿಸುತ್ತಿರುವುದನ್ನು ಕಣ್ಣಾರೆ ಕಾಣುತ್ತಿದ್ದೇವೆ, ತಮ್ಮ ಆತಂಕ ಏಕೆಂದರೆ ಕನ್ನಡಕ್ಕಾಗಿ ಹೋರಾಟ ಮಾಡಿದಂಥವರು, ಅದಕ್ಕೆ ಈ ಸರ್ಕಾರ ಬದ್ಧವಾಗಿದೆ, ಆದರೆ ಇಂಥ ಕೆಲವು ಕಾನೂನು ತೊಡಕಗಳಿಂದಲೂ ತೊಂದರೆಯಾಗಿದೆ. ಇನ್ನು ತಾವು ಹೇಳಿದಂತೆ ಮಾಹಿತಿ ತಂತ್ರಜ್ಞಾನ ಮತ್ತು ಬಿ.ಟಿ ವಿಚಾರದಲ್ಲಿ ನಾವು ಪ್ರತಿಭೆಯನ್ನು ಅವಲಂಬಿಸಿಯೇ ಈ ಕೆಲಸವನ್ನು

ಮಾಡುತ್ತೇವೆಂದು ಹೇಳಿದ್ದಾರೆ. ಅದರೂ ಕೂಡ ನಾವು ಅವರನ್ನು ಕರೆದು ಮಾತನಾಡಿದ್ದೇವೆ, ಪ್ರತಿಭೆ ನಿಮ್ಮ ಉದ್ದೇಶವಾಗಿರಬಹುದು, ಆದರೆ campus interview ಮಾಡತಕ್ಕಂಥ ಸಂದರ್ಭ ಬಂದಾಗ ನೀವು ಕೇವಲ ಬೆಂಗಳೂರಿನಲ್ಲಿ ಮಾತ್ರ campus interview ಮಾಡತಕ್ಕಂಥದ್ದಲ್ಲ, ಅದನ್ನು ನೀವು ಒಳನಾಡುಗಳಾದ ಬೀದರ್, ಗುಲ್ಬರ್ಗಾ, ಬಳ್ಳಾರಿ ಇಂಥ ಕಡೆ ಅಲ್ಲಿನ ಕಾಲೇಜುಗಳಲ್ಲಿ ನೀವು campus interview ಮಾಡಿದರೆ ನಿಜವಾದ ಕನ್ನಡಿಗ ಪ್ರತಿಭಾವಂಥನಾದವನು ಅಲ್ಲಿಗೆ ಬರಲಿಕ್ಕೆ ಸಾಧ್ಯವಿರುತ್ತದೆ ಎನ್ನವಂಥ ಮಾತನ್ನು ಕೂಡ ಹೇಳಿದ್ದೇವೆ. ಸರ್ಕಾರ ಇದರ ಬಗ್ಗೆ ಒತ್ತಡವನ್ನು ತರತಕ್ಕಂಥ ವಿಚಾರವನ್ನು ನಾವು ಕಾನೂನು ಪ್ರಕಾರ ಮಾಡಲಿಕ್ಕೆ ಆಗುವುದಿಲ್ಲ ಅದು ಸ್ವಲ್ಪ ನಮಗೆ ಕಷ್ಟವಾಗಿದೆ ಎನ್ನುವಂಥ ರೀತಿಯಲ್ಲಿ ಕೂಡ ಹಿಂದೆ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರೂ ಕೂಡ ಇದರ ಬಗ್ಗೆ ಅವರ ಜೊತೆಯಲ್ಲಿ ಮಾತನಾಡಿದರು, ಒಂದು ಪ್ರತಿಕ್ರಿಯೆಯನ್ನು ಅವರು ತೋರಿಸಿದರು. ಒಂದು ವೇಳೆ ನಾವು ಏನಾದರೂ ಕೂಡ ಕನ್ನಡಿಗರಿಗೆ ಆದ್ಯತೆಯನ್ನು ಕೊಡಬೇಕೆಂದಾಗ ಅವರು ಬೇರೆ ಬೇರೆ ಉದ್ಯೋಗದ ಆದ್ಯತೆಯನ್ನು ತೋರಿಸಿ ಪರ್ಸೆಂಟೇಜ್‌ನಲ್ಲಿ ಅವರಿಗೆ ಕೊಟ್ಟಿದ್ದೇವೆ ಎನ್ನತಕ್ಕಂಥದ್ದ ರೀತಿಯಲ್ಲಿ ಅವರು ಯೋಚನೆಯನ್ನು ಮಾಡುತ್ತಾರೆ. ಕೆಳವರ್ಗದ ಉದ್ಯೋಗಗಳನ್ನು ಇವರಿಗೆ ಕೊಟ್ಟು ಮೇಲ್ವರ್ಗದ ಉದ್ಯೋಗಗಳನ್ನು ಅನ್ಯ ಪ್ರಾಂತ್ಯದಲ್ಲಿರತಕ್ಕಂಥವರಿಗೆ ಕೊಟ್ಟಿರತಕ್ಕಂಥ ಉದಾಹರಣೆಗಳು ಸಹ ಇವೆ. ಖಂಡಿತವಾಗಿ ಸರ್ಕಾರ ಕನ್ನಡಿಗರಿಗೆ ಉದ್ಯೋಗ ಕೊಡತಕ್ಕಂಥದ್ದು ಏಕೆಂದರೆ ಅವರ ಉಪ್ಪಿನಿಂದ ಅವರ ಅಭಿಮಾನದಿಂದ ನಾವು ಇಲ್ಲಿಗೆ ಗೆದ್ದು ಬಂದಿದ್ದೇವೆ. ಆ ಕಾರಣಕ್ಕಾಗಿ ನಾವು ಬದ್ಧರಾಗಿದ್ದು ಮತ್ತು ನಿಮ್ಮ ಸಲಹೆಯ ಬಗ್ಗೆ ಕೂಡ ನಮ್ಮ ಕಾರ್ಮಿಕ ಸಚಿವರು ಅವರ ಜೊತೆಗೆ ನಿಮ್ಮನ್ನು ಕರಸಿ ಮಾತನಾಡಿ ಅದಕ್ಕೆ ಪರಿಹಾರವನ್ನು ಕಂಡುಹಿಡಿಯುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರ ಬಗ್ಗೆ ನಮಗೆ ಗೌರವ ಇದೆ. ಗಾಣಗಿತ್ತಿ ಅಯ್ಯೋ ಎಂದರೆ ಕೂಸಿನ ತಲೆ ಮೇಲೆ ಎಣ್ಣೆ ಬರಲಿಲ್ಲ. ನೀವು ಅಯ್ಯೋ ಎಂದಿರಿ ಅಷ್ಟೆ. ಎಣ್ಣೆ ಬರಲಿಲ್ಲ, ಅದುದರಿಂದ ನನಗೆ ಅನ್ನಿಸುತ್ತದೆ, ತಾವು ಕನ್ನಡಿಗರ ಬಗ್ಗೆ ನಮಗೆ ಅಭಿಮಾನ ಇದೆ ಎಂದು ಹೇಳಿದಿರಿ, ಸರೋಜಿನಿ ಮಹಿಷಿ ವರದಿಯನ್ನು ನಾವು ಜಾರಿಗೆ ತರುತ್ತಿದ್ದೇವೆ. ಐಟಿ ಇರಬಹುದು ಬಿಟಿ ಇರಬಹುದು ಕರ್ನಾಟಕದ ನೆಲದಲ್ಲಿ ಯಾವುದೇ ಖಾಸಗಿ ಕಾರ್ಖಾನೆಗಳು ಇರಬಹುದು ಎಲ್ಲಿಯೇ ಇರಬಹುದು, ನೂರಕ್ಕೆ ನೂರು ಭಾಗ ನಾವು ಕನ್ನಡಿಗರಿಗೆ ಉದ್ಯೋಗ ಕೊಡುತ್ತೇವೆ ಅಂತ ಹೇಳಬೇಕು. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗ ಕೊಡಲಾರದೆ

ತಮಿಳುನಾಡಿನಲ್ಲಿ ಕೊಡುವುದಕ್ಕಾಗುತ್ತದೆಯೆ? ಅಂದ್ರದಲ್ಲಿ ಕೊಡುವುದಕ್ಕಾಗುತ್ತದೆಯೇ? ಕೇರಳದಲ್ಲಿ ಕೊಡುವುದಕ್ಕಾಗುತ್ತದೆಯೆ? ಅದಕ್ಕೆ ನಾನು ಕೇಳುತ್ತೇನೆ, ಇದರ ಬಗ್ಗೆ ದಯವಿಟ್ಟು ಸ್ಪಷ್ಟಪಡಿಸಬೇಕು. ತಾವಾಗಲಿ ಕಾರ್ಮಿಕ ಸಚಿವರಾಗಲಿ ನೇರವಾಗಿ ಹೇಳಿ, ನಾವು ಮಾಡುತ್ತೇವೆ ನಮ್ಮ ನಿಲುವು ಅದು ನಮ್ಮ ತೀರ್ಮಾನವೆಂದು ದಯವಿಟ್ಟು ಹೇಳಿ ಸಾರ್.

ಉಪಾಧ್ಯಕ್ಷರು : ಇದು ಚರ್ಚೆಗೆ ಹೋದರೆ ಬಹಳ ಲೇಟಾಗುತ್ತದೆ, ಇನ್ನೂ 15 ಪ್ರಶ್ನೆಗಳು ಬಾಪಿ ಇವೆ. ಒಂದು ನಿಮಿಷ ಕುಳಿತುಕೊಳ್ಳಿ ಅವರು ಉತ್ತರ ಹೇಳುತ್ತಾರೆ, ಅಮೇಲೆ ಬೇಕಾದರೆ ತಾವು ಕೇಳಿ.

ಶ್ರೀ ವೈಜನಾಥ್ ಪಾಟೀಲ್ : ನನ್ನದೊಂದು clarification ಕೇಳುತ್ತೇನೆ. ಈಗೇನು staff ಇರುತ್ತದೆ ಅದರ ಸಂಖ್ಯೆ ಕಡಿಮೆ ಮಾಡಬೇಕು employment offices ಕಡಿಮೆ ಮಾಡಬೇಕು ಎನ್ನುವ ಉದ್ದೇಶ ಸರ್ಕಾರದಲ್ಲಿ ಇದೆ ಎಂದು ಕೆಲವು ಕಾರ್ಮಿಕರು ಬಂದು ಹೇಳಿದರು. ಆಫೀಸ್ ಬಂದ್ ಮಾಡಿ ನಮ್ಮನ್ನು ತೆಗೆದುಬಿಡುತ್ತಾರೆ, ಬಹುಶಃ ಇವೆಲ್ಲಾ ಉತ್ತರಪ್ರದೇಶ ಬಿಹಾರದವರಿಗೆ ತಂದು ತುಂಬುವಂಥ ತಯಾರಿ ಕಾಣಿಸುತ್ತದೆ, ಅಂಥ ಒಂದು ಉದ್ದೇಶ ಸರ್ಕಾರಕ್ಕೆ ಇದೆಯೇನು ಎಂದು ನಾನು ಮಾನ್ಯ ಕಾರ್ಮಿಕ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಹಿರಿಯ ಸದಸ್ಯರಾದ ಪಾಟೀಲರು ಕೇಳಿದ ಹಾಗೆ ಈ Employment Exchange ನಲ್ಲಿ ಸ್ಟಾಫ್ ಬಗ್ಗೆ ಕೇಳಿದಿರಿ, ಹಾರ್ನಳ್ಳಿ ರಾಮಸ್ವಾಮಿಯವರ ವರದಿ ಪ್ರಕಾರ 15 ಜನರಿಗೆ ಮಾತ್ರ ಇಟ್ಟುಕೊಂಡು ಉಳಿಕೆದನ್ನು ಅಬಾಲಿಷ್ ಮಾಡಬೇಕೆಂದು ಕೊಟ್ಟಿದ್ದರು. ಆದರೆ ಆಯಾಯ ಜಿಲ್ಲೆಯಲ್ಲಿ ಉದ್ಯೋಗಾರ್ಥಿಗಳು ಏನು ಇರುತ್ತಾರೆ, ಅವರಿಗೆ ಅವಶ್ಯಕತೆ ಇರುತ್ತದೆ ಎಂದು ಹೇಳಿ ನಾವು ಏನು ಮಾಡಿದೆವು ಎಂದರೆ, 417 ಸ್ಟಾಫ್‌ನಲ್ಲಿ 167 ಪೋಸ್ಟ್‌ಗಳನ್ನು ಅಬಾಲಿಷ್ ಮಾಡಿ 250 ಪೋಸ್ಟ್ ಈಗ ಕಾರ್ಯನಿರ್ವಹಿಸುತ್ತಿವೆ.

ಶ್ರೀ ವೈಜನಾಥ್ ಪಾಟೀಲ್ : ಬೇರೆ ಪ್ರದೇಶದ ಕೆಲವು ಅಧಿಕಾರಿಗಳ conspiracy ಇದೆ ಅವರು ತಮ್ಮ ಪ್ರದೇಶದಿಂದ ತಂದು ಇಲ್ಲಿ ಸರ್ಕಾರಿ ನೌಕರಿಗಳಲ್ಲಿ ಬೇರೆ ಬೇರೆ ಕಾರ್ಖಾನೆಗಳಲ್ಲಿ ತುಂಬುವ ಉದ್ದೇಶವಿದೆ ಆ ದೃಷ್ಟಿಯಿಂದ ಎಂಪ್ಲಾಯ್‌ಮೆಂಟ್ ಆಫೀಸ್ ತೆಗೆದು ಬಿಡಬೇಕು ರೆಕಾರ್ಡ್ ಯಾವುದೂ ಸಿಗದ ಹಾಗೆ ಅವರೇನು ಇಲ್ಲಿಯವರಾ ಅಥವಾ ಬೇರೆ ಕಡೆಯಿಂದ ಬಂದಿದ್ದಾರೋ ಎಂದು ಗೊತ್ತಾಗದ ರೀತಿಯಲ್ಲಿ ಮಾಡಬೇಕೆನ್ನುವ ಉದ್ದೇಶ ಏನಾದರೂ ಇದೆಯೇ?

ಉಪಾಧ್ಯಕ್ಷರು : ಸಚಿವರೇ ನೀವು ಉತ್ತರ ಕೊಡಿ, ವಾಟಾಳ್ ನಾಗರಾಜ್ ರವರೇನು ಕೇಳಿದರು ಅದಕ್ಕೆ ಉತ್ತರ ಹೇಳಿಬಿಡಿ ಸಾರ್.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್‌ನಾಗರಾಜ್‌ರವರು ಈಗ ಗಾಣಗಿತ್ತಿ ಬಗ್ಗೆ ಹೇಳಿದ್ದರು. ಆದ್ದರಿಂದ ಬಸವಣ್ಣನವರು ಹೇಳಿರತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ.

ಎಳ್ಳಿಲ್ಲದ ಗಾಣವನಾಡಿದ
ಮುದಿ ಎತ್ತಿನಂತಾಯಿತ್ತೆನ್ನ ಭಕ್ತಿ

ಎಂದು ಹೇಳುತ್ತಾರೆ. ಎಳ್ಳು ಇಲ್ಲದಿದ್ದರೆ ಗಾಣವನ್ನು ತಿರುವಿದ ಮುದಿ ಎತ್ತಿನಂತೆ ಎಷ್ಟೋ ಸಂದರ್ಭದಲ್ಲಿ ಆಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ನಿಮ್ಮ ಸರ್ಕಾರದ ಸ್ಥಿತಿ ಕೂಡ ಇದೇ ರೀತಿಯಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ಸರ್ಕಾರದ ಸ್ಥಿತಿ ಅಲ್ಲ. ಇವತ್ತಿನದಿವಸ ನಮ್ಮಲ್ಲಿರುವ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ಹಿನ್ನಲೆಯಲ್ಲಿ ಬಹಳ ಬದಲಾವಣೆಗಳು ಆಗುತ್ತಿವೆ. ಆದ್ದರಿಂದ, ಕನ್ನಡದ ಪರವಾಗಿ ಸರ್ಕಾರ ನಿಲ್ಲುತ್ತದೆ ಎಂಬ ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಾನು ಇದನ್ನು ವಿರೋಧಿಸುತ್ತೇನೆ. ಕನ್ನಡದ ಪರವಾಗಿ ಇದ್ದೇವೆಂದು ಇವರು ಮೊಸಳೆ ಕಣ್ಣೀರು ಸುರಿಸುವುದು ಸರಿಯಿಲ್ಲ. ಕನ್ನಡಿಗರು ಇದನ್ನು ನಂಬಿಕೊಂಡು ಸಂತೋಷ ಪಡತಕ್ಕಂಥದರಲ್ಲಿ ಏನಿಲ್ಲ. ಇವರು ಕನ್ನಡಿಗರ ಬಗ್ಗೆ ಕೇವಲ ಘೋಷಣೆಗಳನ್ನು ಮಾತ್ರ ಮಾಡುತ್ತಿದ್ದಾರೆ. ಸರೋಜಿನಿ ಮಹಿಷಿ ವರದಿಯನ್ನು ಪ್ರಾಮಾಣಿಕವಾಗಿ ಜಾರಿಗೆ ತರುವುದಕ್ಕೆ ಈ ಸರ್ಕಾರಕ್ಕೆ ಪ್ರಾಮಾಣಿಕತೆ ಇಲ್ಲ. ಇದನ್ನು ವಿರೋಧ ಮಾಡಿ ನಾನು ಸಭಾತ್ಯಾಗ ಮಾಡುತ್ತೇನೆ. ಆದರೂ ಚಿಂತೆ ಇಲ್ಲವೆಂದು ಅವರು ಹೇಳಬಹುದು. ಇದು ನಿಜವಾಗಿಯೂ ಸಹ ಸರಿಯಲ್ಲ. ಕನ್ನಡಿಗರ ಬಗ್ಗೆ ಪ್ರಾಮಾಣಿಕತೆ ಇಲ್ಲ. ಹೊರಗಡೆಯಿಂದ ಲಕ್ಷಾಂತರ ಜನ ಬರುತ್ತಿದ್ದಾರೆ. ಕನ್ನಡಿಗರಿಗೆ ಇವತ್ತಿನದಿವಸ ನೋವಾಗಿದೆ. ಕನ್ನಡಿಗರಿಗೆ ಅನ್ಯಾಯವಾಗಿದೆ. ಕನ್ನಡಿಗರನ್ನು ಇವತ್ತಿನದಿವಸ ಕೇಳುವವರು ಇಲ್ಲ. ಮತ್ತೆ ಕನ್ನಡಿಗರಿಗೆ ಉದ್ಯೋಗ ಇಲ್ಲದೆ ಇರತಕ್ಕಂಥದ್ದು ನಮ್ಮ ಪ್ರಶ್ನೆ ಆದ್ದರಿಂದ ಇವುಗಳ ಬಗ್ಗೆ ಕೇವಲ ಮಾತನಾಡಿದರೆ ಸಾಧ್ಯವಿಲ್ಲ. ಆದ್ದರಿಂದ ಈ

ಸರ್ಕಾರದ ಕನ್ನಡ ವಿರೋಧಿ ಧೋರಣೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಸರೋಜಿನಿ ಮಹಿಷಿ ವರದಿ ಜಾರಿಯಾಗಬೇಕೆಂದು ಘೋಷಿಸುತ್ತಾ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಸ್.ಎಸ್. ಪಾಟೀಲ್ : ಸರೋಜಿನಿ ಮಹಿಷಿ ವರದಿ ಜಾರಿಯಾಗಬೇಕೆಂಬುದಕ್ಕೆ ನಾವೂ ಕೂಡ ಬೆಂಬಲ ಸೂಚಿಸುತ್ತೇನೆ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಉಪಾಧ್ಯಕ್ಷರೆ, ನಾವೂ ಕೂಡ ಅದಕ್ಕೆ ಬೆಂಬಲ ಸೂಚಿಸುತ್ತೇವೆ. ಸರೋಜಿನಿ ಮಹಿಷಿ ವರದಿ ಬರಲಿ. ಏಕೆ ಎಲ್ಲರೂ ಮೌನವಾಗಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಸರೋಜಿನಿ ಮಹಿಷಿ ವರದಿ ಜಾರಿ ಬರುವುದಕ್ಕೆ ನಮ್ಮದೂ ಕೂಡ ಬೆಂಬಲ ಇದೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ನರೇಂದ್ರಬಾಬುರವರೇ, ತಾವು ದಯವಿಟ್ಟು ಕುಳಿತು ಕೊಳ್ಳಿ. ಈಗ ಮುಂದಿನ ಪ್ರಶ್ನೆ ತೆಗೆದುಕೊಳ್ಳುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು : ಸರೋಜಿನಿ ಮಹಿಷಿ ವರದಿ ಜಾರಿಯಾಗಬೇಕು. ಇದು ಆದರೆ ಮಾತ್ರ ಇಲ್ಲಿರತಕ್ಕಂಥ ಕನ್ನಡಿಗರಿಗೆ ಕೆಲಸ ಸಿಗುವುದಕ್ಕೆ ಸಾಧ್ಯ.

ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ವಸತಿ ಶಾಲೆಗಳು

317(695) ಶ್ರೀ ಪಾಟೀಲ್ ಡಿ.ಆರ್. (ಗದಗ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ಒಟ್ಟು ವಸತಿ ಶಾಲೆಗಳು ಎಷ್ಟು; ಈ ಶಾಲೆಗಳಲ್ಲಿರುವ ವಿದ್ಯಾರ್ಥಿಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಇದರಲ್ಲಿ ಸ್ವಂತ ಕಟ್ಟಡ ಹೊಂದಿರುವ ವಸತಿ ಶಾಲೆಗಳು ಎಷ್ಟು ಸ್ವಂತ ಕಟ್ಟಡವಿಲ್ಲದ ಶಾಲೆಗಳು ಎಷ್ಟು;

ಇ) ಈ ವಸತಿ ಶಾಲೆಗಳಲ್ಲಿ ಮಕ್ಕಳ ಆಹಾರಕ್ಕಾಗಿ ಒದಗಿಸುವ ತಲಾನುಧಾನ ಎಷ್ಟು; ಈ ಬಾಬ್ತಿನಲ್ಲಿ ಆಗಿರುವ ವಾರ್ಷಿಕ ವೆಚ್ಚ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಈ) ಈ ಶಾಲೆಗಳ ಪರೀಕ್ಷಾ ಫಲಿತಾಂಶಗಳು ಜಿಲ್ಲೆಯ ಸರಾಸರಿಗಿಂತ ಉತ್ತಮವಾಗಿದೆಯೇ;